ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/308/ಸುತ್ತೋಲೆ/2018-19/ಸೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:11 .08.2022

## ಸುತ್ತೋಲೆ

ವಿಷಯ: 2017ನೇ ಮತ್ತು ಇತರೆ ಸಾಲಿನಲ್ಲಿ ನೇಮಕಗೊಂಡ ಬೋಧಕ/ಬೋಧಕೇತರ ನೌಕರರುಗಳ ಪರೀಕ್ಷಾರ್ಥ ಸೇವಾಧಿ ಘೋಷಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆಗಳ ದಿನಾಂಕ:20.04.2019/20.08.2020 ಮತ್ತು ದಿನಾಂಕ:24.11.2021.

*****

ಕಾಲೇಜು ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಹಾಗೂ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೂ ಈ ಮೂಲಕ ತಿಳಿಸುವುದೇನೆಂದರೆ, ಉಲ್ಲೇಖಿತ ಪತ್ರಗಳಲ್ಲಿ 2017ನೇ ಸಾಲಿನಲ್ಲಿ ನೇಮಕಾತಿ ಹೊಂದಿರುವ ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷಾರ್ಥ ಸೇವಾವಧಿ ಘೋಷಿಸುವ ಸಂಬಂಧ ನಿಯಮಾನುಸಾರ ದಾಖಲಾತಿಗಳನ್ನು ಪರಿಶೀಲಿಸಿ ಅವರುಗಳ ಸೇವಾಪೂರ್ವ ಅವಧಿ ತೃಪ್ತಿಕರವಾಗಿ ಪೂರೈಸಿರುವರೆಂದು ಪರಿಗಣಿಸುವ ಕುರಿತು ಪ್ರಸ್ತಾವನೆಯನ್ನು ಕಳುಹಿಸುವಂತೆ ಉಲ್ಲೇಖಿತ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಲಾಗಿತ್ತು.

ಮುಂದುವರೆಯುತ್ತಾ, ತಮ್ಮ ಕಾಲೇಜುಗಳಲ್ಲಿ ಇದುವರೆಗೂ 2017 ಮತ್ತು ಇತರೆ ಸಾಲಿನಲ್ಲಿ ನೇಮಕಗೊಂಡ ಬೋಧಕ/ಬೋಧಕೇತರ ನೌಕರರುಗಳ ಪರೀಕ್ಷಾರ್ಥ ಸೇವಾವಧಿ ಪೂರೈಸಿಲ್ಲದಿರುವ ಪ್ರಕರಣಗಳೆಷ್ಟು? ಹಾಗೂ ಅವುಗಳಿಗೆ ಕಾರಣಗಳೇನು? ಎಂಬುದರ ಕುರಿತು ಸೂಕ್ತ ದಾಖಲೆಗಳೊಂದಿಗೆ ಈ ಸುತ್ತೋಲೆ ತಲುಪಿದ **ದಿನಾಂಕ:16.08.2022** ರೊಳಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ಮಾಹಿತಿಗಳನ್ನು ಭರ್ತಿಮಾಡಿ ಕೇಂದ್ರ ಕಛೇರಿಗೆ ಮಾಹಿತಿ ಒದಗಿಸಲು ಹಾಗೂ ಸದರಿ ಮಾಹಿತಿಯನ್ನು service2dce2014@gmail.comನ ಈ-ಮೇಲ್ ವಿಳಾಸಕ್ಕೆ ಕಳುಹಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಎಲ್ಲಾ ದಾಖಲೆಗಳು ಕ್ರಮಬದ್ಧವಾಗಿದ್ದು, ಪ್ರಸ್ತಾವನೆಗಳನ್ನು ಕಳುಹಿಸಿಕೊಡಲು ವಿಳಂಬ ಮಾಡಿದಲ್ಲಿ ಸಂಬಂಧಪಟ್ಟ ಕಾಲೇಜಿನ ಅಧ್ಯಾಪಕರು/ನೌಕರರು ಹಾಗೂ ಪ್ರಾಂಶುಪಾಲರನ್ನು ನೇರಹೊಣೆಗಾರರನ್ನಾಗಿ ಮಾಡಿ ಅವರುಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

11/08/2022

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಇವರಿಗೆ:-

1. ಜಂಟಿ ನಿರ್ದೇಶಕರ ಕಛೇರಿ, ಬೆಂಗಳೂರು/ಮಂಗಳೂರು/ಧಾರವಾಡ/ಗುಲ್ಬರ್ಗಾ/ಮೈಸೂರು/ ಶಿವಮೊಗ್ಗ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು,ಮಾಹಿತಿ ತಂತ್ರಜ್ಞಾನ ವಿಭಾಗ ಕೇಂದ್ರ ಕಛೇರಿ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಹೆಚ್ಚಿನ ಪ್ರತಿ.
5. ಕಛೇರಿ ಪ್ರತಿ.

# ಅನುಬಂಧ

| ಕ್ರ.ಸಂ | ಕಾಲೇಜಿನ ಹೆಸರು | ಅಧ್ಯಾಪಕರ ಹೆಸರು | ವಿಷಯ | ಕರ್ತವ್ಯಕ್ಕೆ ಹಾಜರಾದ ದಿನಾಂಕ | ಸೇವಾಪೂರ್ವ ಅವಧಿ ತೃಪ್ತಿಕರವಾಗಿ ಘೋಷಿಸಬೇಕಾಗಿರುವ ದಿನಾಂಕ | ಸೇವಾಪೂರ್ವ ಅವಧಿ ಘೋಷಿಸದಿರಲು ಕಾರಣ | ಸೇವಾಪೂರ್ವ ಅವಧಿ ವಿಸ್ತರಣೆಗೆ ಸಂಬಂಧಿಸಿದಂತೆ ಕ್ರಮ ವಹಿಸಲಾಗಿದೆಯೇ | ಈಗಾಗಲೇ ಸೇವಾಪೂರ್ವ ಅವಧಿ ಘೋಷಣೆಯಾಗಿರುವ ಪ್ರಕರಣಗಳೆಷ್ಟು | ಬಾಕಿ ಪ್ರಕರಣಗಳೆಷ್ಟು |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

1. ತಮ್ಮ ಕಾಲೇಜಿನಲ್ಲಿ 2017 ಮತ್ತು ಇತರೆ ಸಾಲಿನಲ್ಲಿ ನೇಮಕಗೊಂಡ ಬೋಧಕ/ಬೋಧಕೇತರ ನೌಕರರುಗಳ ಪರೀಕ್ಷಾರ್ಥ ಸೇವಾಧಿ ಪೂರ್ಯೆಸಿಲ್ಲದಿರುವ ಶೂನ್ಯ ವರದಿಯನ್ನು ಸಲ್ಲಿಸತಕ್ಕದ್ದು.

2. ತಮ್ಮ ಕಾಲೇಜಿನಲ್ಲಿ ನಿಯೋಜನೆ ಮೇಲಿರುವ ಅಧ್ಯಾಪಕರ ಸೇವಾ ಪೂರ್ವ ಅವಧಿ ಘೋಷಣೆ ಆಗಿಲ್ಲದಿರುವ ಪ್ರಕರಣಗಳನ್ನು ಸಹ ಉಲ್ಲೇಖಿಸತಕ್ಕದ್ದು.